ದಿಃ **24.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ವಿ ಪಿ ವಕೀಲರಿಂದ ವಾದಿಯ ಪರ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ನನಗೆ ತಿಳಿದಿದ್ದು ಸತ್ಯವಾಗಿರುತ್ತದೆ.

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ.

1. ದಿನಾಂಕ 14.07.2020 ರಂದು ನಮ್ಮ ಬ್ಯಾಂಕಿನಿಂದ ನೀಡಿದ ಮತ್ತು ಸಾಲಗಾರರಾದ ಮಹಮ್ಮದ್ ಹುಸೈನ್ ರವರು ಒಪ್ಪಿದ credit sanction intimation.
2. ಸಾಲಗಾರರಾದ ಮಹಮ್ಮದ್ ಹುಸೈನ್ ರವರು ದಿನಾಂಕ 17.07.2020 ರಂದು ನಮ್ಮ ಬ್ಯಾಂಕಿಗೆ ಬರೆದುಕೊಟ್ಟ Hypothecation agreement
3. ದಿನಾಂಕ 17.07.2020 ರಂದು ಸಾಲಗಾರರಾದ ಮಹಮ್ಮದ್ ಹುಸೈನ್ ರವರು ನಮ್ಮ ಬ್ಯಾಂಕಿಗೆ ಬರೆದುಕೊಟ್ಟ On Demand Promissory ಪತ್ರ
4. ಸಾಲಗಾರರಾದ ಮಹಮ್ಮದ್ ಹುಸೈನ್ ರವರು ದಿನಾಂಕ 17.07.2020 ರಂದು ಬರೆದುಕೊಟ್ಟ Take Delivery Letter
5. ಸಾಲಗಾರರಾದ ಮಹಮ್ಮದ್ ಹುಸೈನ್ ರವರು ದಿನಾಂಕ 17.07.2020 ರಂದು ಬರೆದುಕೊಟ್ಟ General Power of Attorney for Book Debts
6. ದಿನಾಂಕ 01.07.2023 ರಂದು ಪ್ರತಿವಾದಿಯರು ಬರೆದುಕೊಟ್ಟ Acknowledgment of Debt
7. ದಿನಾಂಕ 01.07.2023 ರಂದು ಪ್ರತಿವಾದಿಯರು ನಮ್ಮ ಬ್ಯಾಂಕಿಗೆ ನೀಡಿದ ಸಾಲ ದೃಡೀಕರಣ ಪತ್ರ
8. ದಾವ ಸಾಲದ ಖಾತೆಗೆ ಸಂಬಂಧಪಟ್ಟ Statement of Account ಮತ್ತು ಅದಕ್ಕೆ ಸಂಬಂಧಿಸಿದ ಪ್ರಮಾಣ ಪತ್ರ
9. ದಿನಾಂಕ 25.11.2024 ರಂದು ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿ
10. ಪ್ರತಿವಾದಿ 1(a) ರವರಿಗೆ ನೋಟಿಸ್ ಜಾರಿಯಾದ ಕುರಿತು ಅಂಚೆ ಸ್ವೀಕೃತಿ ಪತ್ರ
11. ಪ್ರತಿವಾದಿ 1(b) ರವರು ನೋಟಿಸನ್ನು ಸ್ವೀಕರಿಸದೇ ಹಿಂದಕ್ಕೆ ಬಂದ ನೊಂದಾಯಿತ ಅಂಚೆ ಕವರು (ಸದರಿ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅದರಲ್ಲಿ ನೋಟಿಸ್ ಇರುವುದು ಕಂಡು ಬರುತ್ತದೆ)
12. ದಿನಾಂಕ 18.09.2025 ರಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದವರು ನೀಡಿದ ನಾನ್ Starter ವರದಿ

ಸದರಿ ದಾಖಲಾತಿಗಳನ್ನು ನಿಪಿ-**1** ರಿಂದ ನಿಪಿ-**12** ರಂತೆ ಕ್ರಮವಾಗಿ ಗುರುತಿಸಲಾಯಿತು.

ಸಾಲಗಾರರಾದ ಮಹಮ್ಮದ್ ಹುಸೈನ್ ರವರು ನಮ್ಮ ಬ್ಯಾಂಕಿಗೆ ನೀಡಿದ ಸಾಲದ ಅರ್ಜಿಯ ಜೆರಾಕ್ಸ್ ನಕಲು ಹಾಜರುಪಡಿಸಿದ್ದು, ಸದರಿ ದಾಖಲಾತಿಯು ಜೆರಾಕ್ಸ್ ನಕಲು ಆಗಿರುವುದರಿಂದ ಅದನ್ನು ನಿಶಾನೆಯನ್ನಾಗಿ ಗುರುತಿಸಲು ನಿರಾಕರಿಸಲಾಯಿತು.

ಆದುದ್ದರಿಂದ ದಾವೆಯಲ್ಲಿ ಕೇಳಿದಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಶ್ರೀ ಕೆ ಪಿ ಆರ್ ವಕೀಲರಿಂದ ಪ್ರತಿವಾದಿ ಒಂದು (ಎ) ಮತ್ತು (ಬಿ) ರವರ ಪರ

ಪ್ರತಿವಾದಿ ಒಂದು (ಎ) ಮತ್ತು ಒಂದು (ಬಿ) ರವರು ಮೃತ ಮಹಮ್ಮದ್ ಹುಸೈನ್ ರವರ ವಾರಿಸುದಾರರಾಗಿ ಕೇವಲ ಸಾಲ ಒಪ್ಪಿಗೆ ಪತ್ರವನ್ನು ಮಾತ್ರ ಬರೆದುಕೊಟ್ಟಿದ್ದು ಬೇರೆ ಯಾವುದೇ ದಾಖಲಾತಿಯನ್ನು ಬರೆದುಕೊಟ್ಟಿಲ್ಲ. ನಿಪಿ-6 ಮತ್ತು ನಿಪಿ-7 ಕ್ಕೆ ಪ್ರತಿವಾದಿಯರಿಗೆ ವಿಚಾರ ತಿಳಿಸದೇ ಸಹಿ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಮೃತ ಮಹಮ್ಮದ್ ಹುಸೈನ್ ರವರಿಗೆ ಯಾವುದೇ ಆಸ್ತಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಮೃತ ಮಹಮ್ಮದ್ ಹುಸೈನ್ ರವರಿಂದ ಯಾವುದೇ ಆಸ್ತಿಯು ಸಹ ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಈ ದಾವೆಯಲ್ಲಿ ಕೇಳಿದ ಸಾಲದ ಹಣವನ್ನು ಪಾವತಿಸಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓದಿಸಿ ಕೇಳಿ ತಿಳಿದುಕೊಂಡು ಸರಿ ಇದೆ ಎಂದು ಒಪ್ಪಿರುತ್ತಾರೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದ.ಕ., ಮಂಗಳೂರು.